ಸುಧಾ
ಯುಗಾದಿ ವಿಶೇಷಾಂಕ–2023

ಇದೀಗ ಪೇಟೆಯಲ್ಲಿ ಲಭ್ಯ




ಹರುಷಕೊಂದು ಹೊಸತು ನೆಲೆಯು...

- ಬಹುಮಾನಿತ ಪ್ರಬಂಧಗಳು
- ಶ್ರೀರಂಗಪಟ್ಟಣ ಚಿತ್ರಪಟ ಕಥನ
- ವಲಸೆ ಹಕ್ಕಿಗಳ ಕನ್ನಡಕಾಶಿ
- ಸಾಬರಮತಿಯಿಂದ ದಾಂಡಿಯವರೆಗೆ
- ಯುಗಾದಿಗೆ ಕಾವ್ಯದ ಸಿಂಚನ
- ಕನಸು–ಭರವಸೆಗಳ ಅನುರಣನ
- ಮಕ್ಕಳ ಓದಿಗೆ–ನಟನೆಗೆ ಸೊಗಸಾದ ನಾಟಕ
- ಮುತ್ತಿನಂಥ ಮೂರು ಕಥೆಗಳು
- ಕಳ್ಳೆಕಾಯ್ ಕಳ್ಳೆಕಾಯ್ ಕಳ್ಳೆಕಾಯ್
- ಕಥಾನಾಯಕ ನಾಯಕಿಯರಾದ ಅಂಕಿತಾ, ದುನಿಯಾ ವಿಜಯ್ ಸಂದರ್ಶನ
- ಕಾಮಿಡಿ ಸ್ಪೆಷಲ್
- ಉಸ್ತಾದ್ ಹಫೀಜ್ ಬಾಲೆಖಾನ್ ಜೊತೆ ಮಾತುಕತೆ
- ಯುಗಾದಿ ಫಲಾಫಲ
- ಓದುಗರ ವೇದಿಕೆ

# ಓದುಗರು ಕಂಡಂತೆ ಯುಗಾದಿ ಸಂಚಿಕೆ

## ಮನಮೋಹಕ ಚಿತ್ರಪಟಗಳ ಜಾತ್ರೆ

ನವ ಸಂವತ್ಸರ ಶೋಭಾಕೃತ್‌ಗೆ ನಗುಮೊಗದಿಂದ ಸ್ವಾಗತಿಸಿದ ಅಂಕಿತಾ! ಹೊಸ ಚಿಗುರು, ಹಳೆ ಬೇರಿನಂತೆ ವಿವಿಧ ಕಲಾವಿದರ ಬರಹಗಳು! 'ನಾನೂ ನನ್ನ ಕನಸು' ಇಮ್ಮಡಿಸಿದೆ ಯುಗಾದಿ ವಿಶೇಷಾಂಕದ ಸೊಗಸು! ಯುವ ಕವಿಗಳ ಕವಿತೆಗಳ ತೋರಣ, ಕವಿತೆಯ ಸಾಲುಗಳ ಹೂರಣ! 'ಕಳೆದುಹೋಯಿತೇ ಊರು?' – ಇಲ್ಲ ಇಲ್ಲ, ಆಧುನಿಕತೆಯ ಮೆರುಗಿನೊಂದಿಗೆ ಎದ್ದಿವೆ ಸೂರು! ಇದು ರೀಲ್, ಅಲ್ಲಲ್ಲ ರಿಯಲ್ ಪುರಾಣ! ದಾಂಡಿ ಯಾತ್ರೆ, ಮನಮೋಹಕ ಚಿತ್ರಪಟಗಳ ಸುಂದರ ಜಾತ್ರೆ! ಒಂದೇ ಎರಡೇ... ಇದೊಂದು ಸಂತೃಪ್ತ ಭಾವದ ಸಂಚಿಕೆ.

–ಟಿ.ಎಸ್. ಪ್ರತಿಭಾ, ಚಿತ್ರದುರ್ಗ

## ನವನವೀನ ಯುಗಾದಿ ಸಂಚಿಕೆ

ಈ ಬಾರಿಯ ಯುಗಾದಿ 'ಸುಧಾ' ವಿಶೇಷಾಂಕ ತುಂಬಾ ಸೊಗಸಾಗಿ ಮೂಡಿಬಂದಿದೆ. ಕನ್ನಡ ವಿವೇಕದ ವಿಶ್ವ ಮಾನವತ್ವ ಕುರಿತ 'ವಲಸೆ ಹಕ್ಕಿಗಳ ಕನ್ನಡ ಕಾಶಿ' ಲೇಖನಗಳು ಹೊಸ ಮಾಹಿತಿಯನ್ನು ಒದಗಿಸಿವೆ. ಈ ನೋವಿನ ಸಂಗತಿಗಳು ಬಹಳ ಜನಕ್ಕೆ ಗೊತ್ತಿಲ್ಲ. 'ಕಣ್ಣಿನ ಖಾಯಿಲೆ' ಕಥೆ ತುಂಬಾ ಮಾರ್ಮಿಕವಾಗಿದೆ. ದಂಡಿ ಯಾತ್ರೆ, ಕಥಾ ನಾಯಕಿಯ ಕಥೆ, ಲೇಖನಗಳು ಹಾಗೂ ಮಕ್ಕಳ ನಾಟಕ ಬಹಳ ಇಷ್ಟವಾದವು.

–ಮಲ್ಲಿಕಾರ್ಜುನ ಹೆಗ್ಗಳಗಿ ಮುಧೋಳ

## ವೈವಿಧ್ಯದ ಸೊಗಸಿಗೆ ಇನ್ನೊಂದು ಹೆಸರು

'ಸುಧಾ ಯುಗಾದಿ ವಿಶೇಷಾಂಕ 2023' ಹೆಸರೇ ಸೂಚಿಸುವಂತೆ ವಿಶೇಷವೇ ಆಗಿದೆ. ಕಥೆಗಳು, ಕವಿತೆಗಳು, ಬಹುಮಾನಿತ ಪ್ರಬಂಧಗಳು, ಮಕ್ಕಳ ನಾಟಕ, ದಾಂಡಿ ಯಾತ್ರೆ, ಕಾಮಿಡಿ ಟೈಂ, ಕಳ್ಳೆಕಾಯ್, ಕಾಣಿಕೆ ಸ್ಮರಣಿಕೆ, ನಾನು ನನ್ನ ಕನಸು, ಸಿನಿಮಾದ ನಾಯಕ/ನಾಯಕಿಯರ ಕಥೆ, 'ಊರು ಕಳೆದುಹೋಯಿತೇ?' ಶೀರ್ಷಿಕೆಯಡಿ ಓದುಗರ ಅನಿಸಿಕೆಗಳು, ವಲಸೆ ಹಕ್ಕಿಗಳ ಕನ್ನಡ ಕಾಶಿ ಮೊದಲಾದವು ತುಂಬಾ ಸೊಗಸಾಗಿವೆ.

–ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಪೈಸಾ ವಸೂಲ್ ವಿಶೇಷಾಂಕ

ಶ್ರೀರಂಪಟ್ಟಣದ ಚಿತ್ರಪಟ ಕಥನ ಹಾಗೂ ಸಾಬರಮತಿ–ದಾಂಡಿಯಾತ್ರೆಯ ಕಥನಗಳು ವಿಶೇಷಾಂಕದ ಹೈಲೈಟ್ಸ್. ಕಥೆ ಹಾಗೂ ಪ್ರಬಂಧಗಳೂ ಖುಷಿಕೊಟ್ಟವು. ಸಿತಾರ್ ವಾದಕ ಹಫೀಜ್ ಬಾಲೇಖಾನರ ಸಂದರ್ಶನ ಬರಹ ಸೂಪರ್. ಇದು ಪೂರ್ಣಾ ಪೈಸಾ ವಸೂಲ್ ಸಂಚಿಕೆ. 'ಸುಧಾ' ಚಿರಾಯುವಾಗಲಿ.

–ಮುಕುಂದ ಹೆರಕಲ್ಲ, ಬೆಂಗಳೂರು